**ಕುಣಿಗಲ್ ತಾಲ್ಲೂಕು ಕೆಂಪನಹಳ್ಳಿ ರೇಷ್ಮೆ ಮಾರುಕಟ್ಟೆ**

505 - ಶ್ರೀ ಎಸ್. ಪಿ. ಮುದ್ದುಹನುಮೇಗೌಡ (ಕುಣಿಗಲ್) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕುಣಿಗಲ್ ತಾಲ್ಲೂಕು ಕೆಂಪನಹಳ್ಳಿ ರೇಷ್ಮೆ ಮಾರುಕಟ್ಟೆಯಲ್ಲಿನ ಪ್ರದೇಶದಲ್ಲಿ ರೇಷ್ಮೆ ಕೃಷಿ ದಿನೇ ದಿನೇ ಕ್ಷೀಣಿಸುತ್ತಿರುವುದು ನಿಜವೇ*

*ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?*

*ಇ) ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರದ ಕ್ರಮವೇನು?*

ಶ್ರೀ ಡಿ ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

**ರೇಷ್ಮೆ ಬಿತ್ತನ ವಲಯದಲ್ಲಿನ ಮಾರುಕಟ್ಟೆಗಳ ಬಗ್ಗೆ**

506- ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ರೇಷ್ಮೆಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮೈಸೂರು ಬಿತ್ತನೆ ವಲಯದಲ್ಲಿನ ಎಲ್ಲಾ ಮಾರುಕಟ್ಟೆಗಳಿಗೂ ಸರ್ಕಾರವು ಬಿತ್ತನೆ ಗೂಡಿಗಾಗಿ ಸಮಾನಾಂತರ ಬೇಡಿಕೆ ಸಲ್ಲಿಸುತ್ತಿದೆಯೇ?*

*ಆ) ಎಲ್ಲಾ ಮಾರುಕಟ್ಟೆಗಳಲ್ಲಿ ಕಳೆದ ಒಂದು ವರ್ಷದಲ್ಲಿ ಸರ್ಕಾರದ ಬೇಡಿಕೆ ಎಷ್ಟಷ್ಟು? ಈ ಬಗ್ಗೆ ಪೂರ್ಣ ವಿವರ ನೀಡುವದು*

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

ಅ) ಮಿಶ್ರತಳಿ ಪ್ರದೇಶದ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರೇಷ್ಮೆ ಬೆಳೆಗಾರರ ಗೂಡಿನ ಗುಣಮಟ್ಟ ಹಾಗೂ ಉತ್ಪಾದನೆ ಮೇಲೆ ಬೇಡಿಕೆ ನೀಡಲಾಗುತ್ತಿದೆ.

ಆ) ಅನುಬಂಧ (1) ರಲ್ಲಿ ವಿವರವನ್ನು ಒದಗಿಸಿದೆ.

## ಅನುಬಂಧ -1

ಸನ್ಮಾನ್ಯ ಶ್ರೀ ಎಸ್. ಪಿ. ಮುದ್ದಹನುಮೇಗೌಡ, ಶಾಸಕರು, ಕುಣಿಗಲ್ ಕ್ಷೇತ್ರ, ಇವರ ಚುಕ್ಕೆ ಗುರುತಿನ ಪ್ರಶ್ನೆ 808 ಮೈಸೂರು ಬಿತ್ತನೆ ವಲಯದ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ 1994-95 ಮತ್ತು 1995-96ನೇ ಸಾಲಿನ ಜನವರಿ 96ರ ಅಂತ್ಯದವರೆಗೆ ಬೇಡಿಕೆ ಮತ್ತು ಪೂರೈಕೆ.

| ಕ್ರಮ ಸಂಖ್ಯೆ | ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಯ ಹೆಸರು | ಬೇಡಿಕೆ ಸಲ್ಲಿಸಿರುವುದು | | ಪೂರೈಕೆ ಮಾಡಿದ ಮೈಸೂರು ಬಿತ್ತನೆ ಗೂಡುಗಳು | |
|---|---|---|---|---|---|
| | | 94-95 (ಲಕ್ಷಗಳಲ್ಲಿ) | 95-96ರ ಜನವರಿ ಅಂತ್ಯಕ್ಕೆ | 94-95 (ಲಕ್ಷಗಳಲ್ಲಿ) | 95-96ರ ಜನವರಿ ಜನವರಿ ಅಂತ್ಯಕ್ಕೆ |
| 1. | ಕುಣಿಗಲ್ | 887.00 | 632.00 | 455.38 | 337.21 |
| 2. | ಹೆಬ್ಬೂರು | 860.00 | 582.00 | 399.64 | 369.73 |
| 3. | ಹುಲಿಯೂರುದುರ್ಗ | 615.00 | 501.00 | 313.75 | 291.63 |
| 4. | ಕೆಂಪನಹಳ್ಳಿ | 156.00 | 109.00 | 11.93 | 6.07 |
| 5. | ಸಂತೇಮಾವತ್ತೂರು | 173.00 | 257.00 | 32.08 | 68.42 |
| 6. | ಮಾಗಡಿ | 425.00 | 380.00 | 246.74 | 279.99 |
| 7. | ಕುದೂರು | 507.00 | 245.00 | 168.67 | 117.22 |
| 8. | ವಿ.ಬಿ. ದೊಡ್ಡಿ | 118.00 | 38.00 | 27.21 | 13.24 |
| | ಒಟ್ಟು | **3741.00** | **2744.00** | **1655.40** | **1483.51** |